ಕೇಳಿದ. “ಏನ ಇಲ್ಲಲಾ ಲಕ್ಷ್ಮವ್ವನ ಹತ್ರ ಒಂದಿಷ್ಟು ಕೆಲಸ ಐತಿ. ಅದಕ ಹೊಂಟೇನಿ,” ಅಂದಳು. “ತಲೆ ಸೀಳಿ ಹೋಗೂ ಬಿಸಲಾಗ ಅದೆಂಥ ಕೆಲಸ? ಯಾಕ ಸಂಜೀ ಮುಂದ ಹೋದ್ರ ಆಗ್ತಿದ್ದಲ್ಲನೂ?” ಅಂತ ಮತ್ತೆ ಕೇಳಿದ. “ಅದು ಸಂಜೀಮಟ ಕಾಯುವಂಥದಲ್ಲ, ಮಾಡ್ಯಾಳಂದ್ರ ತಗೊಂಡ ಬರಬೇಕ ಅಷ್ಟ. ತಿಳೀತನಲಾ?” ಎಂದು ಬಾಯೊಳಗಿನ ಜೊಲ್ಲು ಅವನ ಮುಖಕ್ಕೆ ಬಡಿಯುವಷ್ಟು ಒತ್ತಿಯಾಗಿ ಹೇಳಿ ಮತ್ತೆ ಪ್ರಯಾಣ ಬೆಳೆಸಿದಳು. ಫಕೀರಪ್ಪನಿಗೆ ಇದನ್ನು ಗೊತ್ತು ಹಿಡಿಯಲು ಅಷ್ಟೇನು ಕಷ್ಟದಾಯಕವಾಗಿರಲಿಲ್ಲ. ಲಕ್ಷ್ಮವ್ವ ಇಂಥ ಮುದುಕಿಯರಿಗೆ ಒಳ್ಳೊಳ್ಳೆ, ತಿಂಡಿ ತಿನಿಸು ಮಾಡಿಕೊಡುತ್ತಿದ್ದಳು. ಮುದುಕಿಯರ ನಾಲಿಗೆಗಳು ಮಹಾನ್ ತಿಂಡಿಪೋತ ನಾಲಿಗೆಗಳು. ಈ ನಾಲಿಗೆಗಳಿಗೆ ರುಚಿ ಬಿದ್ದರೆ ಇವಕ್ಕೆ ಬಿಸಿಲು, ಮಳೆ, ಅತಿವೃಷ್ಟಿ, ಅನಾವೃಷ್ಟಿ ಯಾತರದ ಖಬರೂ ಉಳಿಯುವುದಿಲ್ಲ. ಬೇಕಾದ ತಿಂಡಿ ತಿನಿಸುಗಳ ನೆನಪಾದರೆ ಬಾಯಲ್ಲಿ ಜುಳುಜುಳು ನೀರು ಸುರಿಸುತ್ತಾ ಅವಸರದ ಪ್ರಯಾಣ ಶುರುವಾಗಿ ಬಿಡುತ್ತದೆ. ಒಳ್ಳೇ ತಿಂಡಿ ಸಿಗುವ ಸ್ಥಳ ಮೈಲಿಯ ಮೇಲಿದ್ದರೂ ಮುಟ್ಟಲೇಬೇಕಾದ ಪಾಜಿ ಎನ್ನುವಂತೆ ಪ್ರಯಾಣ ಬೆಳೆಸುತ್ತಾರೆ. ಈ ಮುದುಕಿಯರಿಗೆ ವಯಸ್ಸಾಗುತ್ತಿದ್ದಂತೆ ಎಲ್ಲ ತಲುಬುಗಳು ನಾಲಿಗೆಗೇ ಬಂದು ಲಂಗರು ಹಾಕುತ್ತವೆ. ಹಲ್ಲಿರದಿದ್ದರೂ ಆ ಬಾಯಿಗಳು ಸವಿಯುವ ಸೊಗಸನ್ನು ನೋಡಬೇಕು. ತಿಂಡಿ ತಿನಿಸನ್ನು ದವಡೆಗಳ ನಡುವೆ ಹಾಕಿ ಜಬ್ಬಿದರೆಂದರೆ ಅದರ ರಸವೆಲ್ಲ ಅನ್ನನಾಳದ ಗುಂಟ ಇಳಿದು, ದೇಹದ ಒಳಗಡೆ ಸಾರಿಸಿದಂತಾಗುತ್ತದೆ. ಯಾವುದೋ ಅವ್ಯಕ್ತ ಸುಖವನ್ನು ಆ ದವಡೆಗಳ ಮಧ್ಯೆ ಅನುಭವಿಸುತ್ತಾರೆ. ಆ ದವಡೆಗಳೂ ಟ್ಯೂಬಿಲ್ಲದ ಟಯರಿನಂತಾಗಿರುತ್ತವೆ. ಅವುಗಳ ಮಧ್ಯೆಯೇ ಅನುಭವಿಸುವ ಸುಖವನ್ನು ಕಣ್ಣಾರೆ ನೋಡಬೇಕು!

ಫಕೀರಪ್ಪನಿಗೆ ಖಾತ್ರಿಯಾಗಿ ಗೊತ್ತಿತ್ತು, ಭಾಗಜ್ಜಿ ಲಕ್ಷ್ಮವ್ವನ ಮನೆಗೆ ಯಾಕೆ ಹೊರಟಿದ್ದಾಳೆಂದು. ಲಕ್ಷ್ಮವ್ವ ಹುರೆಕ್ಕಿ ಹೋಳಿಗೆ ಮಾಡುವುದರಲ್ಲಿ ಬಹಳ ಪ್ರಸಿದ್ಧಿಯಾಗಿದ್ದಳು. ಆಕೆ ವಯಸ್ಸಾದ ಹೆಂಗಸರಿಗೆ ಯಾವ ಬೇಸರವಿಲ್ಲದೇ ತಿಂಡಿತಿನಿಸು ಮಾಡಿಕೊಡುತ್ತಿದ್ದಳು. ಆಕೆ ಕೊಡುತ್ತಿದ್ದ ವಿನೀತಭಾವದ ಗೌರವ ಹಾಗೂ ರುಚಿಕಟ್ಟಾಗಿ ಮಾಡುತ್ತಿದ್ದ ಹುರೆಕ್ಕಿ ಹೋಳಿಗೆ ದೊಡ್ಡ ಸಂಖ್ಯೆಯಲ್ಲಿ ಅಜ್ಜಿಗಳು ಗುಂಪುಗೂಡುವಂತೆ ಮಾಡುತ್ತಿದ್ದವು. ಲಕ್ಷ್ಮವ್ವ ಹುರೆಕ್ಕಿ ಹೋಳಿಗೆಯ ನವಣೆಯನ್ನು ಹುರಿಯುವಾಗ, ಹುರಿದು ಬೀಸುವಾಗ ಅದರ ಘಮ ಘಮ ವಾಸನೆ ಓಣಿಯಲ್ಲೆಲ್ಲಾ ಪಸರಿಸುತ್ತಿತ್ತು. ಆ ವಾಸನೆಗೇ ಮೂಗುಗಳು ಜಾಗೃತವಾಗುತ್ತಿದ್ದವು. ನಂತರ ತಯಾರಾಗುವ ಹುರೆಕ್ಕಿ ಹೋಳಿಗೆಯ ಹೂರಣ, ಆ ಹೂರಣದಲ್ಲಿ ಯಾಲಕ್ಕಿ, ಕಸಕಸಿ, ಕೊಬ್ರಿ ಲೀನವಾಗುವ ಸಹಜಕ್ರಿಯೆ, ನಾದಿದ ಹಿಟ್ಟಿನ ನಡುವೆ ತೂರಿಕೊಂಡು ಹೋಗುವ ಅದರ ಪರಿ, ನಂತರ ಕುದಿಯುವ ಎಣ್ಣೆಯಲ್ಲಿ ಹದವಾಗಿ ಕರಿಯುವ ಕಾರ್ಯ, ಮುಖ ಕೆಂಪೇರಿ ಬುಟ್ಟಿಗೆ ಬಂದು ಬೀಳುವ ತಯಾರಾದ ಹುರೆಕ್ಕಿ ಹೋಳಿಗೆಗಳು, ಈ ಜಗತ್ತಿನ ವಸ್ತುಗಳಲ್ಲ ಎನ್ನುವಷ್ಟು ಶ್ರೇಷ್ಠವಾಗಿ ಸಿದ್ಧಗೊಂಡು ಹೊರ ಬರುತ್ತಿದ್ದವು. ಉದ್ದಗೇ ಅಗಲಾಗಿ ಲಂಬಿಸಿದ ಗೋಲಾಕಾರದ ಹುರೆಕ್ಕಿ ಹೋಳಿಗೆ ಒಂದರ ಮೇಲೊಂದು ಪೇರಿಸಿದಾಗ, ಅಲ್ಲೊಂದು ಇಲ್ಲೊಂದು ಹುರೆಕ್ಕಿ ಹೋಳಿಗೆಯ ಮೈಮೇಲೆ ತೂತುಗಳು ಸೀಳಿಕೊಂಡು ಅವುಗಳ ಮೈಯಿಂದ ಹೂರಣ ಒಸರುತ್ತಿತ್ತು. ಮಗುವಿನ ಜೊಲ್ಲಿನಂತೆ ಕಾಣುತ್ತಿತ್ತು. ನಾಲಿಗೆಸುಖದ ನಿಧಿಯಂತೆಯೇ ಕಾಣುತ್ತಿದ್ದವು. ಇದು ಒಂದು ಸಿದ್ಧಿ ಎನ್ನುವಂತೆ ಲಕ್ಷ್ಮವ್ವ ಅದನ್ನು ಸಾಧಿಸಿಕೊಂಡಿದ್ದಳು. ಆಕೆಯ ಕೈಯೊಳಗಿನ ರುಚಿ ಯಾರ ಕೈಯಲ್ಲಿಯೂ ಇಲ್ಲ ಎಂದು ಅಜ್ಜಿಗಳು ಕೊಂಡಾಡುತ್ತಿದ್ದವು.